O.S. 226/2016 PW-3

ದಿನಾಂಕಃ 24.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

ನಾನು ಹತ್ತನೇಯ ತರಗತಿಯವರೆಗೆ ಓದಿರುತ್ತೆನೆ. ನನಗೆ ವಾದಿಯ ಕುರುಂಬದ ವಯಕ್ತಿಕ ವಿಚಾರಗಳು ಗೊತ್ತಿಲ್ಲ ಎಂದರೆ ಸರಿ. ನಾನು ನಾಗಲಿಂಗರವರ ಜಮೀನಿನಲ್ಲಿ ಕೆಲಸ ಮಾಡುತ್ತೇನೆ. ಸರ್ವೆ ನಂ.41 ರಲ್ಲಿ 28 ಎಕರೆ ವಿಸ್ತೀರ್ಣ ಇದೆ. ನಾನು ಅವರ ಬಳಿ ಕೆಲಸಕ್ಕೆ ಹೋಗುತಿದ್ದ ಕಾರಣ ಅವರು ನನಗೆ ಸದರಿ ಸರ್ವೆ ನಂ. ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ ಹಾಗೂ ಅದರಲ್ಲಿ 14 ಜನ ಸ್ವಾಧೀನದಲ್ಲಿದ್ದಾರೆ. ಪ್ರತಿಯೊಬ್ಬರು ಎಷ್ಟು ಸ್ವಾಧೀನದಲ್ಲಿದ್ದಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ದಾವಾ ಸ್ವತ್ತಿನ ಚಕ್ಕು ಬಂದಿ ಪೂರ್ವಕ್ಕೆ ಬ್ಲಾಕ್ ನಂ.11, ಪಶ್ಚಿಮಕ್ಕೆ ಹನುಮಯ್ಯರವರ ಜಮೀನು, ಉತ್ತರಕ್ಕೆ ಬಸಲಿಂಗಮ್ಮರವರ ಜಮೀನು, ದಕ್ಷಿಣಕ್ಕೆ ಲಿಂಗನಾಯಕ ರವರ ಜಮೀನು. ಪೂರ್ವಕ್ಕೆ ಬ್ಲಾಕ್ ನಂ.11 ಯಾರು ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.41 ರಲ್ಲಿ ದುರಸ್ತೆಯಾಗಿರುವುದಿಲ್ಲ. ದುರಸ್ತೆಯಾಗದೆ ಯಾರು ಯಾವ ಜಾಗದಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.41 ರಲ್ಲಿ ಹುರಳಿ ಮತ್ತು ರಾಗಿಯನ್ನು ಬೆಳೆದಿರುತ್ತಾರೆ. ವಾದಿಯವರು ಶೇಂಗ ರಾಗಿ ಮತ್ತು ಹುರಳಿಯನ್ನು ದಾವಾ ಸ್ವತ್ತಿನಲ್ಲಿ ಹಾಕಿರುತ್ತಾರೆ. ಬೇರೆಯವರು ಯಾವ ಬೆಳೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ. ವಾದಿಯವರ ತಂದೆ ಸುಮಾರು 1958-59 ರಲ್ಲಿ ಭೂಮಿ ಮಂಜೂರಾತಿಗಾಗಿ

O.S. 226/2016 PW-3

ಅರ್ಜಿಯನ್ನು ನೀಡಿದ್ದರು. ಪ್ರತಿವಾದಿಯು ಸಹ ಸರ್ವೆ ನಂ.41 ರಲ್ಲಿ ಎರಡು ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ಸಹ ಭೂಮಿ ಮಂಜೂರಾತಿಗಾಗಿ ಅರ್ಜಿಯನ್ನು ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯವರಿಗೆ ಮಂಜೂರಾದ ಜಮೀನಿನಲ್ಲಿ ಅವರು ಸ್ವಾಧೀನದಲಿಲ್ಲ ಎಂದು ಸರ್ಕಾರದವರು ಮಂಜೂರಾತಿಯನ್ನು ರದ್ದುಮಾಡಿದ್ದಾರೆ ಎಂದರೆ ಸರಿಯಲ್ಲ.ಮಂಜೂರಾತಿಯನ್ನು ರದ್ದಾದ ನಂತರ ವಾದಿಯು ಅದರನ್ನು ಡಿ.ಸಿ ಕಛೇರಿಯಲ್ಲಿ ಪ್ರಶ್ನಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ಡಿ.ಸಿ ರವರು ತಹಶೀಲ್ದಾರವರಿಗೆ ಸದರಿ ಆದೇಶವನ್ನು ಮರು ಪರಿಶೀಲನೆ ಮಾಡಿ ಎಂದು ಹಿಂದಿರುಗಿಸಿದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಡಿ.ಸಿ ರವರ ಆದೇಶದ ಮೇಲೆ ವಾದಿಯವರು ಕೆ.ಎ.ಟಿ ಗೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ ಹಾಗೂ ಅದು ವಜಾ ಗೊಂಡಿದೆ ಎಂದರೆ ನನಗೆ ಗೊತ್ತಿಲ್ಲ. ತದನಂತರ ವಾದಿಯವರು ಸದರಿ ದಾವೆಯನ್ನು ಹೂಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗಳು

ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.